# ನೆರಳೂರು ಗ್ರಾಮ ಪಂಚಾಯಿತಿ ಕಾರ್ಯಾಲಯ

ನೆರಳೂರು ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು - 562 107.

ನೆ.ಗ್ರಾ.ಪಂ: /2023-24

ದಿನಾಂಕ: 22.02.2024

## ನಿರಾಕ್ಷೇಪಣಾ ಪತ್ರ

ಬೆಂಗಳೂರು ನಗರ ಜಿಲ್ಲೆ,ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ನೆರಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಂಡಿಗಾನಹಳ್ಳಿ ಗ್ರಾಮದ ಸರ್ವೆ ನಂಬರ್ 44/4ರಲ್ಲಿ 02 ಎಕರೆ 25 ಗುಂಟೆ, 78/1ರಲ್ಲಿ 02 ಎಕರೆ 16 ಗುಂಟೆ ಮತ್ತು 78/2ರಲ್ಲಿ 02 ಎಕರೆ ಒಟ್ಟು 07 ಎಕರೆ 01 ಗುಂಟೆ ಜಮೀನು ಇದ್ದು, **ಜಿಲ್ಲಾಧಿಕಾರಿಗಳ ಭೂ ಪರಿವರ್ತನಾ ಆದೇಶ ಸಂಖ್ಯೆ ಎಎಲ್ಎನ್(ಎ)(ಎ)ಎಸ್ಆರ್:145/2014-15 ದಿನಾಂಕ: 19.10.2015, ಎಎಲ್ಎನ್(ಎ)(ಎ) ಸಿಆರ್ 161/2015-16 ದಿನಾಂಕ: 01.02.2016, ಮತ್ತು ಎಎಲ್ಎನ್ (ಎ)(ಎ) ಸಿಆರ್ 59/2015-16 ದಿನಾಂಕ: 19.10.2015** ರಂತೆ ಅರ್ಜಿದಾರರು ಅಭಿವೃದ್ಧಿ ಪಡಿಸಲು ನಿರಾಕ್ಷೇಪಣಾ ಪತ್ರ ಮತ್ತು ಗ್ರಾಮ ಪಂಚಾಯಿತಿ ವತಿಯಿಂದ ನೀರು ಸರಬರಾಜಿನ ಬಗ್ಗೆ ದೃಢೀಕರಣ ನೀಡಲು ಮಾಡಿರುವ ಮನವಿಯಂತೆ ನಮ್ಮ ಗ್ರಾಮ ಪಂಚಾಯಿತಿಯಿಂದ ಸರ್ವೆ ನಂಬರ್ 44/4ರಲ್ಲಿ 02 ಎಕರೆ 25 ಗುಂಟೆ, 78/1ರಲ್ಲಿ 02 ಎಕರೆ 16 ಗುಂಟೆ ಮತ್ತು 78/2ರಲ್ಲಿ 02 ಎಕರೆ ಒಟ್ಟು 07 ಎಕರೆ 01 ಗುಂಟೆ ರಲ್ಲಿ ವಿಸ್ತೀರ್ಣದ ಜಮೀನಿಗೆ **ವಸತಿ ವಿನ್ಯಾಸ ನಕ್ಷೆ** ಅನುಮೋದನೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆಯಲು ನಮ್ಮದು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆಗೊಂಡ ನಕ್ಷೆಗಳನ್ನು ಪಂಚಾಯಿತಿಗೆ ಸಲ್ಲಿಸಿದ್ದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಪಂಚಾಯಿತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂಧಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯವಿದ್ದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು (ಲಭ್ಯತೆಗನುಗುಣವಾಗಿ) ಈ ಮೂಲಕ ದೃಢೀಕರಿಸಿದೆ. ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದ್ದಲ್ಲಿ, ಸರಬರಾಜಿನಲ್ಲಿ ವ್ಯತ್ಯಾಸ ಹಾಗೂ ಸ್ಥಗಿತದ ಬಗ್ಗೆ ಆಯಾ ಕಾಲಕ್ಕೆ ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ನೆರಳೂರು ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು, ಬೆಂ.ನ.ಜಿಲ್ಲೆ